ಅ) ಬೆಂಗಳೂರಿನಲ್ಲಿ ಬಡವರಿಗಾಗಿ ಹೈಟೆಕ್ ಆಸ್ಪತ್ರೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆ.

ಆ) ಹೈಟೆಕ್ ಆಸ್ಪತ್ರೆಯಂತಹ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಇರುವ ಸಾಧ್ಯತೆ ವಿಧಾನ ಕ್ರಮ ಮತ್ತು ಅಗತ್ಯತೆಗಳ ಬಗ್ಗೆ ಪರಿಶೀಲಿಸಲು ಡಾ॥ಆರ್.ಎಂ. ವರ್ಮ ಇವರ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕ್ಷ-ಕಿರಣ ತಂತ್ರಜ್ಞರು ಹಾಗೂ ಕೇಂದ್ರಗಳ ಬಗ್ಗೆ.

334 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕ್ಷ-ಕಿರಣ ತಂತ್ರಜ್ಞರು ಹಾಗೂ ಕೇಂದ್ರಗಳ ನಿಯಂತ್ರಣ ಮತ್ತು ಸುಧಾರಣೆಗೆ ರಾಜ್ಯ ಸರ್ಕಾರ ಏನಾದರೂ ಸಮಿತಿಯನ್ನು ರಚಿಸಿದೆಯೇ ಹಾಗಿದ್ದಲ್ಲಿ ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ?*

ಆ) *ರಚಿಸದಿದ್ದರೆ ಯಾವಾಗ ಸಮಿತಿಯನ್ನು ರಚಿಸಲಾಗುತ್ತಿದೆ.*

ಇ) *ಕ್ಷ-ಕಿರಣ ಸುರಕ್ಷಿತ ಬಳಕೆಗೆ ಸರ್ಕಾರ ನಿಯಾಮಾವಳಿಗಳನ್ನು ಏನಾದರೂ ರೂಪಿಸಿದೆಯೇ?*

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಸಮಿತಿ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಇಲ್ಲ.

ಬಡವರಿಗಾಗಿ ವೈದ್ಯಚಿಕಿತ್ಸೆ ನೀಡಲು ಅವರ್ತ ನಿಧಿ.

335 - ಶ್ರೀ ಆಯನೂರು ಮಂಜುನಾಥ್ (ಹೊಸನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಬಡಜನತೆಯ ಸಲುವಾಗಿ ವೈದ್ಯಕೀಯ ವೆಚ್ಚಭರಿಸುವ ಅವರ್ತ ನಿಧಿ ಸ್ಥಾಪಿಸಲು ಸರ್ಕಾರ ಯೋಚಿಸಿದೆಯೇ?*

ಆ) *ಯೋಚಿಸಿದ್ದರೆ ಇದುವರೆವಿಗೂ ಅದಕ್ಕಾಗಿ ಎಷ್ಟು ಹಣ ಕ್ರೋಢೀಕರಿಸಲಾಗಿದೆ?*

ಇ) *ಇದನ್ನು ಯಾವ ಯಾವ ವೈದ್ಯಕೀಯ ವೆಚ್ಚಕ್ಕಾಗಿ ಭರಿಸಲಾಗುವುದು?*

ಈ) ಇದುವರೆವಿಗೂ ಎಷ್ಟು ಜನರಿಗೆ ಇದರಿಂದ ಸಹಾಯವಾಗಿದೆ?

ಉ) ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜ್ಯದ ಬಡ ಜನತೆಯ ವೈದ್ಯಕೀಯ ವೆಚ್ಚ ಭರಿಸುವ ಸಲುವಾಗಿ ಕರ್ನಾಟಕ ಮುಖ್ಯಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿಯನ್ನು ಸರ್ಕಾರದ ಆದೇಶದ ಸಂಖ್ಯೆ ಆಕುಕ 98 ಎಂಎಂಇ 95 ದಿನಾಂಕ 18-4-1995 ಇದರ ಪ್ರಕಾರ ಸ್ಥಾಪಿಸಲಾಗಿದೆ.

ಆ) ಈವರೆವಿಗೆ ಈ ನಿಧಿಗೆ 13,13,43,005-00 ರೂಗಳ ಮೊತ್ತವನ್ನು ಕ್ರೊಢೀಕರಿಸಲಾಗಿದೆ.

ಇ) ಈ ನಿಧಿಯಿಂದ ಎಲ್ಲಾ ತರಹದ ಅಭ್ಯುದ ಖಾಯಿಲೆಗಳ, ತೀವ್ರ ಹೃದ್ರೋಗಗಳ ಮೂತ್ರ ಪಿಂಡ ಸಂಬಂಧಿಸಿದ ಖಾಯಿಲೆಗಳ ಮತ್ತು ಮೂತ್ರ ಪಿಂಡ ಬದಲಿ ಅಳವಡಿಕೆಗಾಗಿ ತೀವ್ರ ನರ ಶಸ್ತ್ರ ಚಿಕಿತ್ಸೆಗಾಗಿ ತಲೆ ಮತ್ತು ಮೆದುಳಿನ ತೀವ್ರ ಶಸ್ತ್ರ ಚಿಕಿತ್ಸೆಗಾಗಿ ಹಾಗೂ ಕಣ್ಣಿನ ತೀವ್ರ ಖಾಯಿಲೆಗಳಿಗಾಗಿ, ಮುಖ್ಯವಾಗಿ ಲೇಸರ್ ಚಿಕಿತ್ಸೆ ಇತ್ಯಾದಿಗಳಿಗಾಗಿ ಕಾಲಕಾಲಕ್ಕೆ ಗುರುತಿಸಲ್ಪಡುವಂತಹ ಇನ್ನಿತರ ಖಾಯಿಲೆಗಳ ಚಿಕಿತ್ಸೆಗಾಗಿ ವೆಚ್ಚವನ್ನು ಭರಿಸಲಾಗುವುದು.

ಈ) ಮೇಲಿನ ವೈದ್ಯಕೀಯ ವೆಚ್ಚವನ್ನು ಭರಿಸುವ ಸಲುವಾಗಿ ಈಗಾಗಲೇ ಸರ್ಕಾರದಿಂದ ರೂ. 2.00 ಕೋಟಿ ಅನುಧಾನವನ್ನು ಬಿಡುಗಡೆಯಾಗಿದ್ದು, ಇದನ್ನು ಚಿಕಿತ್ಸೆಯ ಸೌಲಭ್ಯಕ್ಕೆ ಗುರುತಿಸಲ್ಪಟ್ಟಂತಹ ಆಸ್ಪತ್ರೆಗಳಿಗಾಗಿ ಹಾಗೂ ಪ್ರತಿ ಜಿಲ್ಲೆಗೆ ಈ ಸಂಬಂಧವಾಗಿ ರಚಿಸಿರುವ ಜಿಲ್ಲಾ ಪರಾಮರ್ಶಕ ಸಮಿತಿಗೆ ಬಿಡುಗಡೆ ಮಾಡಲಾಗುತ್ತಿದೆ.

ಉ) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಗೆ ಮತ್ತು ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಅಧ್ಯಯನ ಸಂಸ್ಥೆ, ಜಯದೇವ ಹೃದ್ರೋಗ ಸಂಸ್ಥೆ, ವಿಕ್ಟೋರಿಯಾ ನೀಡಲು ವೈದ್ಯಕೀಯ ನಿರ್ದೇಶಕರಿಗೆ ಹಣ ಬಿಡುಗಡೆ ಮಾಡಲಾಗಿದೆ.

ಕರ್ನಾಟಕದ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ಪ್ಲಾಂಟೇಷನ್

336- ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ರಬ್ಬರ್ ಪ್ಲಾಂಟೇಷನ್ ವಿಭಾಗ, ಉಪ ವಿಭಾಗ, ಎಷ್ಟು ಇದೆ ಮತ್ತು ಎಲ್ಲೆಲ್ಲಿ ಇದೆ (ಪೂರ್ಣ ಮಾಹಿತಿ ಒದಗಿಸುವುದು)

ಆ) ಯಾವ ಯಾವ ಉಪ ವಿಭಾಗಗಳಲ್ಲಿ ರಬ್ಬರ್ ಮರುನಾಟಿಕೆ ಕೆಲಸ ಪ್ರಾರಂಭ ಮಾಡಲಾಗಿದೆಯೇ, ಎಷ್ಟು ಹೆಕ್ಟೇರ್ ವಿಸ್ತೀರ್ಣದಲ್ಲಿದೆ?